# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 27 ಫ್ರಾ.ಸಾ. : 31**

| | | |
|---|---|---|
| ಸಾಕ್ಷಿಯ ಹೆಸರು | : | ಕವಿತಾ ಸೋಮಸುಂದರ |
| ತಂದೆಯ ಹೆಸರು | : | ರಾಜೇಂದ್ರ |
| ವಯಸ್ಸು | : | 45 ವರ್ಷ |
| ಕೆಲಸ | : | ಕೂಲಿ |
| ವಾಸ | : | ರಾಜೀವ ನಗರ, ಕದ್ರಾ, ಕಾರವಾರ |

**ದಿನಾಂಕಃ 03-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ರಾಜೀವ ನಗರದ ಕದ್ರಾದಲ್ಲಿ ನನ್ನ ಮನೆಯಿದ್ದು, ನಾನು ನನ್ನ ಮಕ್ಕಳೊಂದಿಗೆ ವಾಸವಾಗಿರುತ್ತೇನೆ. ಮೃತ ವೇಲು ನನಗೆ ಗೊತ್ತು, ಆತ ನಮ್ಮ ಪಕ್ಕದ ಮನೆಯವರು, ಆತನಿಗೆ ಒಂದು ಕಾಲು ಮಾತ್ರ ಇದ್ದು, ಆತ ಎರಡು ಊರುಗೋಲುಗಳ ಸಹಾಯದಿಂದ ನಡೆಯುತ್ತಿದ್ದ. ಅವರ ಮನೆಯಲ್ಲಿ ಆತನ ಹೆಂಡತಿ ಜಾನಕಿ ಹಾಗೂ ಆತನ ಮಕ್ಕಳಾದ ಮೃತ ಸತ್ಯ ನಾರಾಯಣ ಹಾಗೂ ಮೃತೆ ಅಶ್ವಿನಿ ವಾಸವಾಗಿದ್ದರು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಆತನನ್ನು ಕದ್ರಾದಲ್ಲಿ ಎಲ್ಲರೂ ಗಿರಿ ಎಂದು ಸಹ ಕರೆಯುತ್ತಾರೆ. ಚಾಸಾ-26 ಶಾಂತಾ ರವರು ನನಗೆ ಗೊತ್ತು, ಅವರು ನಮ್ಮ ಪಕ್ಕದ ಮನೆಯವರು, ಆದರೆ ಈಗ ಅವರು ತೀರಿಕೊಂಡಿರುತ್ತಾರೆ. ಅದೇ ರೀತಿ ಚಾಸಾ-24 ಸುಜಾತಾ ರವರು ನನಗೆ ಗೊತ್ತು, ಅವರು ಸಹ ನಮ್ಮ ಪಕ್ಕದ ಮನೆಯವರು.

2. ಈ ಪ್ರಕರಣದ ಘಟನೆ ನಡೆಯುವ ಪೂರ್ವದಲ್ಲಿ ಆರೋಪಿಯು ಮೃತ ವೇಲು ರವರ ಮನೆಗೆ ಆಗಾಗ ಬಂದು ಹೋಗುತ್ತಿದ್ದನು. ವೇಲು ರವರ ಮನೆಯು ಸಿಮೆಂಟ್ ಸೀಟಿನ ಮನೆಯಾಗಿದ್ದು, ಮನೆಯ ನೆಲವು ಸಿಮೆಂಟ್ ನೆಲವಾಗಿರುತ್ತದೆ, ಅವರು ತಮ್ಮ ಮನೆಗೆ ಹೊಂದಿಕೊಂಡಂತೆ ಅಂಗಡಿಯನ್ನು ಇಟ್ಟುಕೊಂಡಿದ್ದರು ಹಾಗೂ ಅವರ ಮನೆಗೆ ವಿದ್ಯುತ್

ದೀಪದ ಬೆಳಕಿನ ವ್ಯವಸ್ಥೆ ಇರುತ್ತದೆ. ಅದೇ ರೀತಿ ಅವರ ಮನೆಯ ಮುಂದುಗಡೆ ಸಹ ಬೀದಿ ದೀಪದ ಬೆಳಕು ಇರುತ್ತದೆ.

3. ದಿಃ 14-02-2014 ರಂದು ರಾತ್ರಿ 10-30 ರ ಸುಮಾರಿಗೆ ನಾವು ನಮ್ಮ ಮನೆಯಲ್ಲಿದ್ದಾಗ, ವೇಲು ರವರ ಹೆಂಡತಿ ಜಾನಕಿಯು ನಮ್ಮ ಮನೆಗೆ ಬಂದು, ನಮ್ಮ ಮನೆಯ ಬಾಗಿಲನ್ನು ತಟ್ಟಿದ್ದು, ನಾನು ನಮ್ಮ ಮನೆಯ ಹೊರಗಿನ ಲೈಟ್ ನ್ನು ಹಾಕಿ, ಬಾಗಿಲು ತೆರೆದು ನೋಡಿದಾಗ, ಜಾನಕಿಯು ನಮ್ಮ ಮನೆಯ ಮುಂದೆ ನಿಂತಿದ್ದು, ಆಕೆಯ ಎಡಗೈ ತುಂಡಾಗಿ, ರಕ್ತ ಸುರಿಯುತ್ತಿತ್ತು, ಹಣೆಯಲ್ಲಿ ಕತ್ತಿಯಿದ ಕಡಿದ ರಕ್ತ ಗಾಯವಾಗಿತ್ತು. ನಾನು ಆಕೆಯನ್ನು ನೋಡಿ ಹೆದರಿ, ನಮ್ಮ ಮನೆಯ ಬಾಗಿಲನ್ನು ಹಾಕಿಕೊಂಡು, ಚಾಸಾ-26 ಶಾಂತಾ ರವರಿಗೆ ಕರೆ ಮಾಡಿ, ಜಾನಕಿಯ ಕೈ ತುಂಡಾಗಿದೆ, ಹಣೆಗೆ ಕತ್ತಿಯಿಂದ ಕಡಿದ ಗಾಯವಾಗಿ ರಕ್ತ ಸುರಿಯುತ್ತಿದೆ, ಜಾನಕಿ ಅಳುತ್ತಿದ್ದಾಳೆ, ಅದನ್ನು ನೋಡಿ ನನಗೆ ಹೆದರಿಕೆ ಆಗುತ್ತಿದೆ, ನೀವು ಬನ್ನಿ ಎಂದು ಹೇಳಿರುತ್ತೇನೆ. ಆಗ ಚಾಸಾ-26 ರವರು ಅಲ್ಲಿಗೆ ಬಂದು, ಜಾನಕಿಯನ್ನು ನೋಡಿ, ಅವರೂ ಸಹ ಹೆದರಿ, ಮನೆಗೆ ಓಡಿ ಹೋದರು. ಆ ನಂತರ ಜಾನಕಿ ತನ್ನ ಮನೆಗೆ ಹೊರಟು ಹೋದರು. ಜಾನಕಿ ಹೋದ ನಂತರ ಚಾಸಾ-24 ಸುಜಾತಾ ರವರು ನಮ್ಮ ಮನೆಯ ಬಳಿ ಬಂದಿದ್ದು, ಜಾನಕಿ ರವರ ಮನೆಯಲ್ಲಿ ಅಳುವ ಶಬ್ದ ಕೇಳಿ ಬರುತ್ತಿತ್ತು ಹಾಗೂ ಅಶ್ವಿನಿ ಚೀರಾಡಿದ ಶಬ್ದ ಸಹ ಕೇಳಿ ಬಂದಿತ್ತು, ಆದ್ದರಿಂದ ನೋಡೋಣಾ ಎಂದು ಬಂದೆ ಎಂದು ಹೇಳಿರುತ್ತಾಳೆ.

4. ನಂತರ ನಾನು, ಸುಜಾತಳಿಗೆ "ಸ್ವಲ್ಪ ಹೊತ್ತಿನ ಮುಂಚೆ, ಜಾನಕಿ ನಮ್ಮ ಮನೆಗೆ ಬಂದು, ಬಾಗಿಲು ಬಡಿದಿದ್ದು, ಬಾಗಿಲು ತೆಗೆದು ನೋಡಿದಾಗ, ಜಾನಕಿಯು ನಮ್ಮ ಮನೆಯ ಮುಂದೆ ನಿಂತಿದ್ದು, ಆಕೆಯ ಎಡಗೈ ತುಂಡಾಗಿ, ರಕ್ತ ಸುರಿಯುತ್ತಿತ್ತು, ಹಣೆಯಲ್ಲಿ ಕತ್ತಿಯಿದ ಕಡಿದ ರಕ್ತ ಗಾಯವಾಗಿತ್ತು, ಅದನ್ನು ನೋಡಿ ನಾನು ಹೆದರಿಕೊಂಡು, ನಮ್ಮ ಮನೆಯ ಒಳಗೆ ಹೋಗಿ, ಚಾಸಾ-26 ರವರಿಗೆ ಕರೆ ಮಾಡಿ, ವಿಷಯ ತಿಳಿಸಿದೆ, ನಂತರ ಆಕೆಯೂ ಸಹ ನಮ್ಮ ಮನೆಯ ಬಳಿ ಬಂದು, ಜಾನಕಿಯನ್ನು ನೋಡಿ, ತಾನು ಸಹ ಹೆದರಿ ತನ್ನ ಮನೆಗೆ ಹೊರಟು ಹೋದಳು , ನಂತರ ನಾನು ಬಾಗಿಲು ಹಾಕಿಕೊಂಡೆ" ಎಂದು ಹೇಳಿದೆ. ಆ ನಂತರ ನಾನು, ಚಾಸಾ-24 ಮತ್ತು 26 ರವರು ಸೇರಿ ಜಾನಕಿ ಮನೆಯ ಹತ್ತಿರ ಹೋಗಿ ನೋಡಿದಾಗ, ಅಲ್ಲಿ ಸುಮಾರು ಜನರು ಸೇರಿದ್ದರು, ವೇಲು ರವರ ಮನೆಯಲ್ಲಿ ವಿದ್ಯುತ್ ದೀಪದ ಬೆಳಕು ಇರಲಿಲ್ಲ, ಬಾಗಿಲು

ತೆಗೆದಿದ್ದು, ಮನೆಯ ಹಾಲ್ ನಲ್ಲಿ ಅಶ್ವಿನಿಯು ಕೊಲೆಯಾಗಿ ಬಿದ್ದಿದ್ದಳು, ಜಾನಕಿಯು ಅಶ್ವಿನಿಯ ಶವದ ಮುಂದೆ ದೇವರ ದೀಪದ ಬೆಳಕಿನಲ್ಲಿ ಕುಳಿತಿದ್ದಳು. ನಂತರ ನಾವು ನಮ್ಮ ಬಳಿ ಇದ್ದ ಮೊಬೈಲ್ ಟಾರ್ಚ್ ನಿಂದ ವೇಲು ರವರ ಮನೆಯ ಹಾಲ್ ನಲ್ಲಿ ಬಿದ್ದಿದ್ದ ಅಶ್ವಿನಿಯ ಶವವನ್ನು ನೋಡಲಾಗಿ, ಆಕೆಯ ಎಡ ಮುಂಗೈ ತುಂಡಾಗಿ ನೇತಾಡುತ್ತಿತ್ತು, ಎಡ ಕುತ್ತಿಗೆಯ ಬಳಿ ಗಲ್ಲದಿಂದ ಹಿಂಬದಿವರೆಗೆ ಕತ್ತಿಯಿಂದ ಕಡಿದ ಗಾಯವಾಗಿ ರಕ್ತ ಬರುತ್ತಿತ್ತು, ಅದೇ ರೀತಿ ಜಾನಕಿಯ ಎಡಗೈ ತುಂಡಾಗಿತ್ತು ಹಾಗೂ ಹಣೆಯ ಮೇಲೆ ಕತ್ತಿಯಿಂದ ಕಡಿದ ಗಾಯವಾಗಿ ರಕ್ತ ಸುರಿಯುತ್ತಿದ್ದು, ಆಕೆಯು ಮಾತನಾಡುತ್ತಿರಲಿಲ್ಲ ಹಾಗೂ ಮನೆಯ ಹಾಲ್ ಹಾಗೂ ಅವರ ಬೆಡ್ ರೂಮ್ ನಲ್ಲಿ ರಕ್ತ ಹರಡಿತ್ತು. ಆದರೆ ವೇಲು ಹಾಗೂ ಆತನ ಮಗ ಸತ್ಯ ನಾರಾಯಣ ಮೂರ್ತಿ ಅಲ್ಲಿ ಕಾಣಲಿಲ್ಲ.

5. ಸ್ವಲ್ಪ ಸಮಯದ ನಂತರ ಪೊಲೀಸರು ಅಲ್ಲಿಗೆ ಬಂದಿದ್ದು, ಜಾನಕಿಯನ್ನು ಪೊಲೀಸ್ ಜೀಪ್ ನಲ್ಲಿ ಕೆ.ಪಿ.ಸಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಹಾಗೂ ಅಶ್ವಿನಿಯ ಶವ ಮನೆಯ ಹಾಲ್ ನಲ್ಲಿ ಬಿದ್ದಿತ್ತು, ಆ ನಂತರ ಊರಿನ ಜನರು ಹಾಗೂ ಪೊಲೀಸರು ವೇಲು ಹಾಗೂ ಆತನ ಮಗ ಸತ್ಯ ನಾರಾಯಣನನ್ನು ಹುಡುಕುತ್ತಿರುವಾಗ, ರಾತ್ರಿ 01-00 ಗಂಟೆ ಸುಮಾರಿಗೆ ವೇಲು ರವರ ಮನೆಯ ಹತ್ತಿರದಲ್ಲಿರುವ ಕೊಡಸಳ್ಳಿ ಕಡೆಗೆ ಹೋಗುವ ಅರಣ್ಯದ ಕಾಲು ದಾರಿಯಲ್ಲಿ ವೇಲು ಹಾಗೂ ಆತನ ಮಗ ಸತ್ಯ ನಾರಾಯಣ ಮೂರ್ತಿಯ ಶವ ಬಿದ್ದಿರುತ್ತದೆ ಎಂದು ತಿಳಿದು ಬಂತು. ಬೆಳಿಗ್ಗೆ ನಾನು ಹೋಗಿ ನೋಡಿದಾಗ, ಕೊಡಸಳ್ಳಿ ಕಡೆಗೆ ಹೋಗುವ ಅರಣ್ಯದ ಕಾಲು ದಾರಿಯಲ್ಲಿ ವೇಲು ಹಾಗೂ ಆತನ ಮಗ ಸತ್ಯ ನಾರಾಯಣ ಮೂರ್ತಿಯ ಶವಗಳು 15 ಅಡಿ ಅಂತರದಲ್ಲಿ ಬಿದ್ದಿದ್ದು, ವೇಲುವಿನ ಶವದ ಪಕ್ಕದಲ್ಲಿ ಊರುಗೋಲುಗಳು ಸಹ ಬಿದ್ದಿದ್ದವು. ವೇಲು ಹಾಗೂ ಸತ್ಯ ನಾರಾಯಣ ಮೂರ್ತಿಯ ಕುತ್ತಿಗೆಗೆ ಕತ್ತಿಯಿಂದ ಕಡಿದ ಗಾಯವಾಗಿ, ರಕ್ತ ಸುರಿದಿತ್ತು. ಸದರಿ ಕಾಲು ದಾರಿಯು ಮಣ್ಣಿನ ಕಾಲು ದಾರಿಯಾಗಿದ್ದು, ಸುತ್ತಲೂ ರಕ್ತ ಚೆಲ್ಲಿತ್ತು ಹಾಗೂ ಪಕ್ಕದ ಗಿಡಗಳ ಮೇಲೆ ಸಹ ರಕ್ತ ಚೆಲ್ಲಿತ್ತು.

6. ಆ ನಂತರ ಜಾನಕಿಯನ್ನು ಕೆ.ಪಿ.ಸಿ ಆಸ್ಪತ್ರೆಯಿಂದ ಗೋವಾದ ಬಾಂಬೊಲಿನ್ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ತಿಳಿದು ಬಂತು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ನಿಪಿ-3 ಪೋಟೋದಲ್ಲಿ ಕಾಣುತ್ತಿರುವ ಮನೆಯು ವೇಲು ರವರ ಮನೆಯಾಗಿರುತ್ತದೆ, ನಿಪಿ-4, 10, 13 ಪೋಟೋಗಳಲ್ಲಿ ಕಾಣುತ್ತಿರುವ ಶವವು

ಅಶ್ವಿನಿಯ ಶವವಾಗಿರುತ್ತದೆ ಹಾಗೂ ಸದರಿ ಶವವು ವೇಲು ರವರ ಮನೆಯಲ್ಲಿರುತ್ತದೆ. ನಿಪಿ-5, 7, 15 ಪೋಟೋಗಳಲ್ಲಿ ಕಾಣುತ್ತಿರುವ ಶವವು ಸತ್ಯ ನಾರಾಯಣ ಮೂರ್ತಿಯ ಶವವಾಗಿದ್ದು ಹಾಗೂ ನಿಪಿ-6 ಮತ್ತು 14 ಪೋಟೋಗಳಲ್ಲಿ ಕಾಣುತ್ತಿರುವ ಶವವು ವೇಲುವಿನ ಶವವಾಗಿದ್ದು, ಸದರಿ ಶವಗಳು ಬಿದ್ದ ಸ್ಥಳವು ಕೊಡಸಳ್ಳಿ ಕಡೆಗೆ ಹೋಗುವ ಅರಣ್ಯದ ಕಾಲು ದಾರಿಯಾಗಿರುತ್ತದೆ.

7. ದಿಃ 18-02-2014 ರಂದು ನಾನು ಮನೆಯಲ್ಲಿದ್ದಾಗ, ವೇಲು ಮತ್ತು ಆತನ ಮಕ್ಕಳನ್ನು ಕೊಲೆ ಮಾಡಿದ ಆರೋಪಿಯನ್ನು ಪೊಲೀಸರು ಹಿಡಿದಿರುತ್ತಾರೆ ಎಂದು ಕ್ಯಾಂಪ್ ನ ಜನರು ಮಾತನಾಡುತ್ತಿದ್ದು, ಪೊಲೀಸ್ ಠಾಣೆಗೆ ಅವರೆಲ್ಲರೂ ಹೋಗುವುದನ್ನು ನೋಡಿ, ನಾನೂ ಸಹ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನಾನು ಪೊಲೀಸ್ ಠಾಣೆಗೆ ಹೋಗಿ ನೋಡಿದಾಗ, ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಗಿರಿಯನ್ನು ಅಲ್ಲಿ ನೋಡಿರುತ್ತೇನೆ. ಆ ನಂತರ ಅಲ್ಲಿ "ಆರೋಪಿಯು ಮೃತ ವೇಲು ರವರ ಮನೆಯಿಂದ ರೂ.45,000/- ಹಣವನ್ನು ಕಳುವು ಮಾಡಿದ್ದು, ಅದರಲ್ಲಿ ರೂ.37,000/- ಹಣವನ್ನು ಆರೋಪಿಯು ಪುನಃ ಮೃತ ವೇಲು ರವರ ಮನೆಯ ಒಳಗೆ ತಂದು ಇಡುವಾಗ, ವೇಲು ಅದನ್ನು ನೋಡಿದ್ದು, ಆರೋಪಿಗೆ ಉಳಿದ ಹಣವನ್ನು ತಂದು ಕೊಡುವಂತೆ ಹೇಳಿರುತ್ತಾನೆ ಹಾಗೂ ಇಲ್ಲವಾದರೆ, ನಿನ್ನ ವಿರುದ್ಧ ಪೊಲೀಸ್ ಠಾಣೆಗೆ ದೂರನ್ನು ನೀಡುವುದಾಗಿ ಹೇಳಿದ್ದರಿಂದ, ಆರೋಪಿಯು ಹೆದರಿ ವೇಲುವನ್ನು ಕೊಲೆ ಮಾಡುವ ಉದ್ದೇಶದಿಂದ, ದಿಃ 14-02-2014 ರಂದು ವೇಲು ರವರಿಗೆ ಹಣ ಕೊಡುತ್ತೇನೆಂದು ಅವರ ಮನೆಯ ಹತ್ತಿರ ಇರುವ ಕಾಡಿನ ಬಳಿ ಕರೆದಿದ್ದು, ಆಗ ಆತ ತನ್ನ ಮಗನೊಂದಿಗೆ ಆರೋಪಿ ಹೇಳಿದ ಸ್ಥಳಕ್ಕೆ ಹೋದಾಗ, ಆರೋಪಿಯು ಕತ್ತಿಯಿಂದ ವೇಲುವಿಗೆ ಕಡಿದು, ಕೊಲೆ ಮಾಡಿದ್ದು, ಅದನ್ನು ನೋಡಿದ ಆತನ ಮಗ ಸತ್ಯ ನಾರಾಯಣ ಮನೆಯ ಕಡೆಗೆ ಓಡಿ ಬರುತ್ತಿರುವಾಗ, ಆರೋಪಿಯು ಆತನಿಗೂ ಸಹ ಕತ್ತಿಯಿಂದ ಕಡಿದು, ಕೊಲೆ ಮಾಡಿರುತ್ತಾನೆ. ಆ ನಂತರ ವೇಲುವಿನ ಮನೆಗೆ ಬಂದು, ಅಲ್ಲಿಯೂ ಸಹ ಆತನ ಮಗಳಾದ ಅಶ್ವಿನಿಯನ್ನು ಕತ್ತಿಯಿಂದ ಕಡಿದು, ಕೊಲೆ ಮಾಡಿರುತ್ತಾನೆ ಹಾಗೂ ಆತನ ಹೆಂಡತಿಯಾದ ಜಾನಕಿಯ ಮೇಲೆ ಕತ್ತಿಯಿಂದ ಮಾರಣಾಂತಿಕ ಹಲ್ಲೆ ಮಾಡಿರುತ್ತಾನೆ" ಎಂದು ತಿಳಿದು ಬಂತು. ಈ ಬಗ್ಗೆ ನಾನು ಪೊಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು-13 ಊರುಗೋಲುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

8. ಈ ಪ್ರಕರಣದ ಘಟನೆಯ ನಡೆಯುವ ಮೊದಲು 30 ವರ್ಷಗಳಿಂದ ನನಗೆ ಮೃತ ವೇಲು ರವರು ಪರಿಚಯ ಇರುತ್ತಾರೆ. ಮೃತ ವೇಲು ನಮ್ಮ ಸಂಬಂಧಿಕರಲ್ಲ. ವೇಲು ರವರು ಟೈಯರ್ ಪಂಚರ್ ಅಂಗಡಿಯನ್ನು ನಡೆಸುತ್ತಿದ್ದರು. ಅಲ್ಲಿ ಊರಿನ ಜನರು ಹೋಗಿ-ಬಂದು ಮಾಡುತ್ತಿದ್ದರು. ನಮ್ಮ ಮನೆಯ ಎಡಗಡೆ ವೇಲು ರವರ ಮನೆ ಇರುತ್ತದೆ. ನಮ್ಮ ಮನೆಯಿಂದ ವೇಲು ರವರ ಮನೆಯ ನಡುವೆ ಸುಮಾರು 30 ಅಡಿ ಅಂತರ ಇರುತ್ತದೆ. ವೇಲು ರವರ ಮನೆಗೆ ಯಾರಾದರೂ ಬಂದರೆ ನಮಗೆ ಗೊತ್ತಾಗುತ್ತದೆ ಹಾಗೂ ಅದೇ ರೀತಿ ಅಲ್ಲಿ ಯಾರಾದರೂ ಚೀರಾಡಿದರೆ ಮತ್ತು ಜಗಳವಾದರೆ ನಮಗೆ ಕೇಳಿಸುತ್ತದೆ.

9. ನಿಪಿ-3 ಪೋಟೋದಲ್ಲಿ ವಿದ್ಯುತ್ ದೀಪದ ಕಂಬಗಳು ಕಾಣುತ್ತಿಲ್ಲ ಎಂದರೆ ಸರಿ. ದಿಃ 15-02-2014 ರಂದು ನೀಡಿದ ಹೇಳಿಕೆಯಲ್ಲಿ ಜಾನಕಿಯ ಕೈ ತುಂಡಾದ ಬಗ್ಗೆ ನಾನು ಹೇಳಿಲ್ಲ ಎಂದರೆ ಸಾಕ್ಷಿಯು ನಾನು ಹೇಳಿದ್ದೆ, ಆದರೆ ಅದನ್ನು ಬರೆದುಕೊಂಡಿದ್ದರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ, ಏಕೆಂದರೆ ನನಗೆ ಓದಲು-ಬರೆಯಲು ಬರುವುದಿಲ್ಲ. ಘಟನೆಯ ನಂತರ ವೇಲು ರವರ ಮನೆಯ ಒಳಗೆ ಮೊದಲು ಯಾರು ಹೋಗಿದ್ದರು ಎಂದು ನಾನು ನೋಡಿರುವುದಿಲ್ಲ. ಊರಿನ ಜನರು ಮನೆಯ ಒಳಗೆ ಹೋಗಿ, ನೋಡಿ ಬರುತ್ತಿದ್ದರು. ನಾನು ವೇಲು ಹಾಗೂ ಸತ್ಯ ನಾರಾಯಣ ಮೂರ್ತಿಯ ಶವವನ್ನು ನೋಡಲು ಹೋದಾಗ, ಅಲ್ಲಿ ಪೊಲೀಸರು ಹಾಗೂ ಬಹಳಷ್ಟು ಜನರು ಸೇರಿದ್ದರು. ಜಾನಕಿಯೊದಿಗೆ ಯಾರಾದರು ಮಾತನಾಡಿದ ಬಗ್ಗೆ ನನಗೆ ಗೊತ್ತಿಲ್ಲ.

10. ಮುದ್ದೆ ಮಾಲು-13 ಊರುಗೋಲುಗಳನ್ನು ಇದೇ ಮೊದಲು ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 18-02-2014 ರಂದು ನಾನು ಕದ್ರಾ ಪೊಲೀಸ್ ಠಾಣೆಗೆ ಹೋಗಿಲ್ಲ, ಅಲ್ಲಿ ಆರೋಪಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯೇ ವೇಲು ಹಾಗೂ ಆತನ ಮಕ್ಕಳನ್ನು ಕಡಿದು ಕೊಲೆ ಮಾಡಿರುತ್ತಾನೆ ಎಂಬ ಬಗ್ಗೆ ಯಾವುದೇ ವಿಷಯ ತಿಳಿದು ಬರದೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ